ಬಿರಿಯಾನಿ. ಒಂದು ಲೋಡು ಬಾಸುಮತಿ ಅಕ್ಕಿ ಪಂಜಾಬಿನಿಂದ ತರಿಸಿದ್ದಾರೆ...'

'ಒಂದು ಲಾರಿ ಲೋಡಾ?'

'ಹೌದು ಮತ್ತೆ. ನಿನ್ನೆ ರಾತ್ರಿ ಲಾರಿ ಬಂದು ಮನೆ ಮುಂದೆ ನಿಂತಾಗ... ಅಬ್ಬಾ, ಹೇಳಿದರೆ ನೀನು ನಂಬೋಲ್ಲ ರಾಮಚಂದ್ರ, ಊರು ತುಂಬಾ ಮಲ್ಲಿಗೆ ಅರಳಿನಿಂತ ಸುವಾಸನೆ. ಅದರ ವಾಸನೆ ನನ್ನ ಮೂಗಿನಿಂದ ಇನ್ನೂ ಹೋಗಿಲ್ಲ. ಅದು ಬಾಸುಮತಿ ಅಕ್ಕಿ!'

ನೂರು ರೂಪಾಯಿ ಹೆಚ್ಚಿಗೆ ಕೊಡುವಂತೆ ಬೇಡಿಕೊಂಡರೂ ಒಪ್ಪದ ಅಸ್ಸೆನಾರ್ ಅವರ ಕಾರು ಮರಳುವಾಗ ಗೋಪಾಲ್ ಯಾದವ್ ಅದರ ಹಿಂದಿನ ಸೀಟಿನಲ್ಲಿ ಕುಳಿತಿದ್ದ.

ಪಳ್ಳಿಕರದತ್ತ ಕಾರು ಹೊರಳಿದಾಗ ಅಸ್ಸೆನಾರ್ ಅವನನ್ನು ಕೇಳಿದರು,

'ಗೋಪಾಲ್, ಬಿಹಾರಿನಲ್ಲಿ ನಿನ್ನ ಊರು ಎಲ್ಲಿ?'

'ಲಾಲ್‌ಮಾತ್ತಿಯಾ ಸಾಬ್' ಅವನು ಹೇಳಿದ.

'ಏನು ಕೆಲಸ ಮಾಡ್ತಿದ್ದೆ?'

'ಕಲ್ಲಿದ್ದಲಿನ ಕೆಲಸ.'

ಗೋಪಾಲ್ ಯಾದವ್ ಲಾಲ್‌ಮಾತ್ತಿಯಾದ ರಾಜ್‌ಮಹಲ್ ಕಲ್ಲಿದ್ದಲು ಗಣಿಯ ಕುರಿತು ಮಾತನಾಡತೊಡಗಿದ. ಖನನ ನಿಲ್ಲಿಸಿ ಕಂಪೆನಿ ಅಲ್ಲಿಂದ ಬಿಟ್ಟರೂ ಎರಡನೆಯ ದರ್ಜೆ ಕಲ್ಲಿದ್ದಲು ಅಲ್ಲಿ ಸಾಕಷ್ಟು ದೊರೆಯುತ್ತಿತ್ತು. ಕಾನೂನಿನ ಅಡಚಣೆ ಇದ್ದರೂ ಅದನ್ನು ಲೆಕ್ಕಿಸದೆ ಊರ ಜನ ಅದನ್ನು ಬಾಚಿ ತೆಗೆಯುತ್ತಾರೆ. ಅವರ ಪೈಕಿ ಹೆಂಗಸರೇ ಅಧಿಕ. ಅಲ್ಲೇ, ಗೋಪಾಲ್ ಮಾತಂಗಿಯನ್ನು ಭೇಟಿಯಾಗಿದ್ದು. ಲಾಲ್‌ಮಾತ್ತಿಯಾದಿಂದ 250 ಕೆ.ಜಿ. ಕಲ್ಲಿದ್ದಲನ್ನು ಸೈಕಲಿನಲ್ಲಿ ಹೇರಿಕೊಂಡು ನಲವತ್ತು ಕಿಲೊಮೀಟರ್ ದೂರದಲ್ಲಿರುವ ಗೊದ್ದ ಎಂಬಲ್ಲಿಯ ತನಕ ತಳ್ಳುತ್ತಾ ಹೋಗಬೇಕಿತ್ತು. ಕೆಲವೊಮ್ಮೆ ಆ ಪ್ರಯಾಣ ಮತ್ತೂ ಇಪ್ಪತ್ತು ಕಿಲೋಮೀಟರ್ ದೂರದಲ್ಲಿರುವ ಬಂಗ್ ತನಕ ಮುಂದುವರಿಯುವುದುಂಟು. ಇಷ್ಟೆಲ್ಲಾ ಎದ್ದುಬಿದ್ದು ಕಷ್ಟಪಟ್ಟರೂ ಕೊನೆಗೆ ಕೈಗೆ ಬರುವುದು ಹತ್ತು ರೂಪಾಯಿ ಮಾತ್ರ.

'ಪಡಚ್ಚೋನೇ(ದೇವರೇ) ಬರೆ ಹತ್ತು ರೂಪಾಯಿನಾ?' ಅಸ್ಸೆನಾರ್ ಕೈಯನ್ನು ತಲೆಮೇಲೆ ಹೊತ್ತುಕೊಂಡು ಹೇಳಿದರು.

'ಹಾಗಲ್ಲ ಸಾಬ್, ಒಟ್ಟು ಸಿಕ್ತಾ ಇದ್ದಿದ್ದು ನೂರಾ ಐವತ್ತು ರೂಪಾಯಿಗಳು' ಗೋಪಾಲ್ ಯಾದವ್ ತಿದ್ದಿದ. 'ಅದರಿಂದ ಪೊಲೀಸಿನವರಿಗೆ, ಗೂಂಡಾಗಳಿಗೆಲ್ಲಾ ಕೊಡಬೇಕು. ಕೆಲವೊಮ್ಮೆ ಸೈಕಲ್‌ನ ಟ್ಯೂಬ್ ಬದಲಾಯಿಸಬೇಕಾಗುತ್ತೆ, ಬಾಲ್‌ಬೇರಿಂಗ್‌ನ ಕೆಲಸಕ್ಕೆಲ್ಲಾ ಖರ್ಚು ಬರುತ್ತದೆ. ಅವೆಲ್ಲವನ್ನು ಕಳೆದು ಕೈಗೆ ಸಿಗೋದು ಹತ್ತು ರೂಪಾಯಿ ಮಾತ್ರ.'

'ಹಾಗೆಲ್ಲಾ ಇದ್ದರೂ ನೀನು ನನ್ನನ್ನು ನೂರು ರೂಪಾಯಿ ಜಾಸ್ತಿ ಕೇಳಿದೆ ಅಲ್ವಾ?' ಅಸ್ಸೆನಾರ್ ಕೋಪದಿಂದ ಗೋಪಾಲ್ ಯಾದವನತ್ತ ನೋಡಿದರು.

'ಏಯ್ ಸುವ್ವರ್, ನೀನು ಊರಿನಿಂದ ಬಂದು ಎಷ್ಟು ವರ್ಷಗಳಾದವೋ?'

'ಪಂದ್ರಹ ಸಾಬ್ ಸಾಬ್'

'ಅಂದ್ರೆ ಹದಿನೈದು ವರ್ಷ. ಅವತ್ತು ಹತ್ತು ರೂಪಾಯಿ ಅಂದ್ರೆ ಈಗ ನೂರು ರೂಪಾಯಿ ಆಗುತ್ತೆ ಅಷ್ಟೆ. ಇಲ್ಲಿ ನಿನಗೆ ನಾನು ಇನ್ನೂರೈವತ್ತು ಕೊಡ್ತಿಲ್ವ?' ಕಾರೋಡಿಸುತ್ತಿರುವುದರ ನಡುವೆ ಅಸ್ಸೆನಾರ್ ಗೊಣಗಿಕೊಂಡರು.

ತನ್ನ ಬಡತನದ ತವಕ ತಲ್ಲಣಗಳನ್ನು ಈತನಿಗೆ ಹೇಳಬಾರದಿತ್ತೆನಿಸಿತು ಗೋಪಾಲನಿಗೆ.